ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 8992/2022

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಸಣ್ಣಮರಿಯಪ್ಪ
ತಂದೆಯ ಹೆಸರು :- ಗಂಗಶಾನಯ್ಯ
ವಯಸ್ಸು :- 60 ವರ್ಷ
ಉದ್ಯೋಗ :- ವ್ಯವಸಾಯ
ವಾಸ :- ಬಿಚನಹಳ್ಳಿ

**ಸಾಕ್ಷಿಗೆ ದಿಃ 17.02.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿತರು ನನಗೆ ಗೊತ್ತು. ಅವರಿಗೂ ನಮಗೂ ಯಾವುದೇ ಸಂಬಂದ ಇಲ್ಲ. ಸುಮಾರು 3 ವರ್ಷಗಳ ಹಿಂದೆ ನಾನು ಚಾಸಾ 1 ಕೆಲಸಕ್ಕೆ ಹೋಗಿದ್ದು ಸಂಜೆ 6 ಗಂಟೆಗೆ ಮನೆಗೆ ಬಂದಿದ್ದು ನಂತರ ಆರೋಪಿ 1 ಮತ್ತು 2 ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿರುತ್ತಾರೆ. ಯಾವುದೋ ಒಂದು ಹುಡುಗಿ ಓಡಿ ಹೋಗಿರುವ ವಿಚಾರಕ್ಕೆ ಗಲಾಟೆ ಮಾಡಿರುತ್ತಾರೆ. ಚಾಸಾ 1 ಅವರನ್ನು ಆರೋಪಿ 1 ಮತ್ತು 2 ಎಳೆದುಕೊಂಡು ಬಂದು ನಿನ್ನತಾಯಾಕೆ, ಬೆಬರಸಿ ಮುಂಡೆ ಎಂದು ಬೈದಿರುತ್ತಾರೆ.

ಆರೋಪಿ1 ಮತ್ತು 2 ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾರೆ. ಆಗ ಚಾಸಾ 1 ಕೆಳಗೆ ಬಿದಿದ್ದು ಆರೋಪಿ 1 ದೊಣ್ಣೆ ತೆಗೆದುಕೊಂಡು ಬಂದು ಚಾಸಾ 1 ಅವರ ಬಲಬುಜಕ್ಕೆ ಹೊಡೆದಿರುತ್ತಾರೆ. ಆರೋಪಿ 5 ನನ್ನನ್ನು ಹೊರಗೆ ಎಳೆದುಕೊಂಡು ಹೋಗಿ ಮೈಮೇಲೆ ತುಳಿದಿರುತ್ತಾರೆ. ಆರೋಪಿ 6 ಮತ್ತು 8 ಚಾಸಾ 1 ಅವರನ್ನು ಎಳೆದುಕೊಂಡು ಹೋಗಿ ಮಾಂಗಲ್ಯ ಸರವನ್ನು ಕಿತ್ತು ಹಾಕಿರುತ್ತಾರೆ. 3 ಗುಂಡು ಮತ್ತು 1 ಓಲೆ ಇರುವುದಿಲ್ಲ.

ಜಗಳವನ್ನು ಯಾರು ಬಿಡಿಸಿರುವುದಿಲ್ಲ. ನಮ್ಮ ಪರವಾಗಿ ಯಾರು ಸಾಕ್ಷಿ ಹೇಳಿರುವುದಿಲ್ಲ. ನಾನು ಹು.ದುರ್ಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಆಗುವುದಿಲ್ಲವೆಂದಿದ್ದಕ್ಕೆ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತೇನೆ. ನಂತರ ದೂರನ್ನು ನೀಡಿರುತ್ತೇವೆ. ನಾನು ನನ್ನ ಹೇಳಿಕೆ ನೀಡಿರುತ್ತೇನೆ. ಮು. ಮಾ. ಗಳನ್ನು ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 23.06.2022 ಗಲಾಟೆ ಆಗಿರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ 1 ಅವರ ಜುಟ್ಟನ್ನು ಹಿಡಿದುಕೊಂಡು ಎಳೆದುಕೊಂಡು ಬರುವಾಗ ಸೊಳೆ ಮುಂಡೆ ಬೋಳಿ ಮುಂದೆ ಹಾದರಗಿತ್ತಿ ಎಂದು ಬೈದಿರುತ್ತಾರೆ ಎಂದರೆ ಸರಿ. ಗಲಾಟೆಯ ಸಮಯದಲ್ಲಿ ಚಾ 3 ಸಹ ನನ್ನ ಜೊತೆ ಇದ್ದ ಎಂದರೆ ಸರಿ. ದೂಣ್ಣೆಯಿಂದ ತೋಳು, ಬಲಗಾಲು ಮತ್ತು ತಲೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ1 ಅವರನ್ನು ಕಳಗೆ ಕೆಡವಿ ಕಾಲಿನಿಂದ ತುಳಿದಿರುತ್ತಾರೆ ಎಂದರೆ ಸರಿ. ಆರೋಪಿ 6 ರಿಂದ 8 ಅವರು ಚಾಸಾ 1 ಧರಿಸಿದ್ದ ಸೀರೆಯನ್ನು ಎಳೆದಾಡಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾಸಾ 3 ಬಿಡಿಸಿಕೊಳ್ಳಲು ಹೋದಾಗ ನಮಗೂ ಸಹ ಕೈ ಯಿಂದ ಮೈಕೈಗೆ ಹೊಡೆದು ನೋವುಂಟುಮಾಡಿರುತ್ತಾರೆ ಎಂದರೆ ಸರಿ. ನಂತರ ಚಾಸಾ 1 ಅವರನ್ನು ಸೀಮೆಎಣ್ಣೆ ಹಾಕಿ ಬೆಂಕಿ ಹಾಕಿ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ 4 ಮತ್ತು 5 ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ.

**ಆರೋಪಿಪರ ವಕೀಲರು ಪಾಟೀ ಸವಾಲಿ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.